ಓ.ಎಸ್. ನಂ.*145/2018*

ಪಿ.ಡಬ್ಲು-*5*

ಸಾಕ್ಷಿಯನ್ನು ಇಂದು ದಿನಾಂಕಃ *21.01.2023* ರಂದು ಕರೆಯಿಸಿ ಪ್ರಮಾಣಿಕರಿಸಲಾಯಿತು

<u>**ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಎ.ಡಬ್ಲು.ಎ. ವಕೀಲರಿಂದ**</u>

ಪ್ರತಿವಾದಿ ಎಷ್ಟು ಉದ್ದಳತೆ ಜಾಗೆಯನ್ನು ಮತ್ತು ಯಾರಿಂದ ಖರೀದಿ ಮಾಡಿರುತ್ತಾನೆ ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿ ತಾನು ಖರೀದಿಸಿದ ಜಾಗೆಯಲ್ಲಿ ಮನೆ ಕಟ್ಟಿರುತ್ತಾನೆ ಎಂದರೆ ಸರಿ. ಪ್ರತಿವಾದಿ ಸದರಿ ಜಾಗೆಯಲ್ಲಿ ಮನೆ ಕಟ್ಟಿ ಸುಮಾರು 4-5 ವರ್ಷವಾಗಿರುತ್ತದೆ. ಪ್ರತಿವಾದಿ ತಾನು ಎಷ್ಟು ಜಾಗೆಯನ್ನು ಖರೀದಿ ಹಿಡಿದಿರುತ್ತಾನೋ ಅಷ್ಟರಲ್ಲಿ ಕಟ್ಟಿರುತ್ತಾನೆ ಎಂದರೆ ಸರಿ ಅಲ್ಲ. ಪ್ರತಿವಾದಿ ಯಾರ ಜಾಗವನ್ನು ಸಹ ಕೂಡ ಅತಿಕ್ರಮಣ ಮಾಡಿರುವುದಿಲ್ಲ ಎಂದರೆ ಸರಿ ಅಲ್ಲ. ಪ್ರತಿವಾದಿ ಅಂದಾಜು 10*20 ರಷ್ಟು ಜಾಗೆಯನ್ನು ಒತ್ತುವರಿ ಮಾಡಿರುತ್ತಾನೆ. ಪೂರ್ವ-ಪಶ್ಚಿಮ 10 ಫೂಟು, ದಕ್ಷಿಣ-ಉತ್ತರ 20 ಫೂಟು ಒತ್ತುವರಿ ಮಾಡಿರುತ್ತಾನೆ. ನನ್ನ ಮುಖ್ಯ ವಿಚಾರಣೆಯಲ್ಲಿ ಪ್ರತಿವಾದಿ ಪೂರ್ವ-ಪಶ್ಚಿಮ 10 ಫೂಟು, ದಕ್ಷಿಣ-ಉತ್ತರ 20 ಫೂಟು ಒತ್ತುವರಿ ಮಾಡಿರುತ್ತಾನೆ ಎಂದು ಹೇಳಿ ಬರೆಸಿರುವುದಿಲ್ಲ ಎಂಥರೆ ಸರಿ. ಸಾಕ್ಷಿ ಮುಂದುವರೆದು ನಾನು ವಾಟ್ನಿಗೆ ಸಾಕ್ಷಿ ಇರುತ್ತೇನೆ ಎಂದು ನುಡಿಯುತ್ತಾರೆ. ವಾದಿ ಮತ್ತು ಪ್ರತಿವಾದಿಯರ ಪಾಲು ವಾಟ್ನಿ ಕುರಿತು ಪಂಚಾಯತಿ ಮಾಡಿರುತ್ತೇನೆ. ನನಗೆ ನಿರ್ದಿಷ್ಟವಾದ ದಿನಾಂಕ ಗೊತ್ತಿಲ್ಲ, ಆದರೆ 3-4 ವರ್ಷಗಳ ಹಿಂದೆ ಸದರಿ ಪಂಚಾಯತಿ ಆಗಿರುತ್ತದೆ.

ಪ್ರತಿವಾದಿಯ ಮನೆಯ ಪೂರ್ವ ದಿಕ್ಕಿಗೆ ವಾಹನ ಓಡಾಡಲು, ದನಕರುಗಳು ಓಡಾಡಲು, ಜನರು ಓಡಾಡಲು ದಾರಿ ಇದೆ ಎಂದರೆ, ವಾದಿಯರಿಗೆ ಮಾತ್ರ ಇರುತ್ತದೆ, ಪ್ರತಿವಾದಿಯರಿಗೆ ದಕ್ಷಿಣ ದಿಕ್ಕಿಗೆ ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ರಸ್ತೆಯು 25*40 ಇರಬಹುದು. ಪೂರ್ವ-ಪಶ್ಚಿಮ 25 ಫೂಟು, ದಕ್ಷಿಣ-ಉತ್ತರ 40 ಫೂಟು ಇರುತ್ತದೆ. ಸದರಿ ಪ್ರತಿವಾದಿಯ ಮನೆಯ ಪೂರ್ವ ದಿಕ್ಕಿನಲ್ಲಿರುವ ರಸ್ತೆಯ ಸರಕಾರಿ ರಸ್ತೆ ಇರುತ್ತದೆ ಎಂದರೆ ಸರಿ ಅಲ್ಲ, ಸಾಕ್ಷಿ ಮುಂದುವರೆದು ಸದರಿ ರಸ್ತೆ ಮುಂದೆ ಸರಕಾರಿ ರಸ್ತೆಗೆ ಕೂಡಿಕೊಳ್ಳುತ್ತದೆ ಎಂದು ನುಡಿಯುತ್ತಾರೆ. ಸದರಿ ರಸ್ತೆ ವಾದಿಗೆ

ಮಾತ್ರ ಸಂಬಂಧಿಸಿದ್ದು ಎಂದು ತಿಳಿದುಕೊಳ್ಳಲು ನೀವೇನಾದರು ಕಾಗದ ಪತ್ರ ನೋಡಿದ್ದೀರಾ ಎಂದರೆ ಸಾಕ್ಷಿಯು ಆ ಪ್ರಸಂಗವೇ ಬಂದಿರಲಿಲ್ಲ ಎಂದು ನುಡಿಯುತ್ತಾರೆ.

ಪ್ರತಿವಾದಿ ತಾನು ಮನೆ ಕಟ್ಟಿಸುವ ಸಮಯದಲ್ಲಿ ಪೂರ್ವ ದಿಕ್ಕಿಗೆ ಅಂಡರ ಗ್ರೌಂಡ ಪೈಪಲೈನ್ ಮಾಡಿ ನೀರು ಹೋಗಲು ಚರಂಡಿಗೆ ಬಿಟ್ಟಿರುತ್ತಾನೆ ಎಂದರೆ, ಸಾಕ್ಷಿಯು ಬಿಟ್ಟಿರುತ್ತಾನೆ, ಜಬರದಸ್ತಿಯಿಂದ ಬಿಟ್ಟಿರುತ್ತಾನೆ ಎಂದು ನುಡಿಯುತ್ತಾರೆ. ಸದರಿ ಪೈಪಲೈನ ಮುಖ್ಯ ಸರಕಾರಿ ಮೋರಿಗೆ ಕಲೆತಿರುತ್ತದೆ ಎಂದರೆ ಸರಿ. ಸಾಕ್ಷಿಗೆ ವಾದ ಪತ್ರದ ನಕಾಶೆಯನ್ನು ತೋರಿಸಿ ಇದೇನಾ ಪೈಪಲೈನ  ಎಂದು ತೋರಿಸಿದಾಗ ಸಾಕ್ಷಿ ಅದೇ ಪೈಪಲೈನ ಇರುತ್ತದೆ ಎಂದು ನುಡಿಯುತ್ತಾರೆ.

ವಾದಿ ಮತ್ತು ಪ್ರತಿವಾದಿಯರ ನಡುವೆ ವಾಟ್ನಿ ಸಂಬಂಧ ಪಂಚಾಯತಿ ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. ಸಾಕ್ಷಿಗೆ ನಿಪಿ-೨೬ನ್ನು ತೋರಿಸಿ ನೀವು ಪಂಚಾಯತಿ ಮಾಡಿ ಬರೆದಿರುವ ಠರಾವು ಇದೇನಾ ಎಂದು ಕೇಳಿದಾಗ ಸಾಕ್ಷಿ ಇದೆ ಎಂದು ನುಡಿಯುತ್ತಾರೆ. ನಿಪಿ-೨೬ನ್ನು ಶಿವರುದ್ರಯ್ಯ ಸ್ವಾಮಿ ಬರೆದಿರುತ್ತಾರೆ. ಸದರಿ ನಿಪಿ-೨೬ನ್ನು ಬರೆಯಲು ಬರೆಯಲು ಅಲ್ಲಿ ನೆರೆದಿರುವ ಪಂಚರು ನೀಡಿದರು. ಸದರಿ ನಿಪಿ-೨೬ರಲ್ಲಿ ಎಲ್ಲಾ ಹಿರಿಯರು ಸೇರಿ ಸದರಿ ಜಾಗದಲ್ಲಿ ಕಲ್ಲು ಮತ್ತು ಮಣ್ಣ ಹಾಕಬಾರದೆಂದು ಠರಾವು ಬರೆದಿರುತ್ತಾರೆ ಎಂದರೆ ಸರಿ ಅಲ್ಲ. ವಾದಿ ಜೊತೆ ನಾವೆಲ್ಲರೂ ಸೇರಿ ಉದ್ದೇಶಪೂರ್ವಕವಾಗಿ ಈ ದಾವೆಗೋಸ್ಕರ ಸೃಷ್ಟಿ ಮಾಡಿರುತ್ತೇವೆ ಎಂಧರೆ ಸರಿ ಅಲ್ಲ. ನಾನು ಹೇಳಿದ ಹಾಗೆ ಯಾವುದೇ ಪಂಚಾಯತಿ ಆಗಿರುವುದಿಲ್ಲ ಎಂದರೆ ಸರಿ ಅಲ್ಲ. ದಾವಾ ಆಸ್ತಿಗೆಯ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ವಾದಿಯರಿಗೆ ಸಹಾಯ ಮಾಡಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ.  ಪ್ರತಿವಾದಿ 10*20 ಅಳತೆಯ ವಾದಿಯ ಜಾಗವನ್ನು ಅತಿಕ್ರಮಣ ಮಾಡಿರುತ್ತಾನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ.

ನಿಪಿ-೨೬ನ್ನು ಪ್ರತಿವಾದಿಯ ಮನೆಯ ಕಟ್ಟಡ ಮುಗಿದ ನಂತರ ಬರೆದಿರುತ್ತೇವೆ ಎಂಧರೆ ಸರಿ ಅಲ್ಲ, ಸಾಕ್ಷಿ ಮುಂದುವರೆದು ಕಟ್ಟಡ ಇನ್ನು ನಡೆದಿತ್ತು ಎಂದು ನುಡಿಯುತ್ತಾರೆ. ಕಟ್ಟಡ ಎಲ್ಲಿವರೆಗೆ

ಆಗಿತ್ತು ಎಂದು ನನಗೆ ಹೇಳಲು ಬರುವುದಿಲ್ಲ. ಸಾಕ್ಷಿ ಮುಂದುವರೆದು ಕಟ್ಟಡ ನಡೆದಿತ್ತು ಎಂದು ನುಡಿಯುತ್ತಾರೆ. ಕಟ್ಟಡ ಎಷ್ಟು ದಿನದೊಳಗಾಗಿ ಮುಗಿದಿರುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲ, ಸಾಕ್ಷಿ ಮುಂದುವರೆದು ನಾನು ಹೊರಗಿನವನು ಇರುತ್ತೇನೆ ಎಂದು ನುಡಿಯುತ್ತಾರೆ. ಪ್ರತಿವಾದಿ ಮಾಡಿರುವ ಕಟ್ಟಡವನ್ನು ನಾನು ನೋಡಿರುವುದಿಲ್ಲ ಎಂದರೆ ಸರಿ ಅಲ್ಲ.

ವಾದಿ ನನಗೆ ಸಂಬಂಧಿಕನಲ್ಲ, ಮತ್ತು ಗೆಳೆಯನೂ ಅಲ್ಲ, ನಾವು ಇಬ್ಬರು ಒಂದೇ ಊರಿನವರು ಇರುತ್ತೇವೆ. ವಾದಿಯ ಮಾತನ್ನು ಕೇಳಿಕೊಂಡು ನಾನು ಅವರು ಹೇಳಿದಂತೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

ಮರುವಿಚಾರಣೆ : ಇರುವುದಿಲ್ಲ.

ಓ.ಹೇ.ಕೆ.ಸರಿ.ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಆಳಂದ.